ಶ್ರೀ ಬಿ.ಎ.ಮೊಯಿದೀನ್ : ಮಾನ್ಯ ಅಧ್ಯಕ್ಷರೆ, ಇದನ್ನು ಬಹಳ ಗಂಭೀರವಾಗಿ ಪರಿಗಣಿಸಿ ಕೆಲಸ ಮಾಡಿಸುತ್ತೇವೆ.

ಶ್ರೀ ಯು.ಆರ್.ಸಭಾಪತಿ : ಮಾನ್ಯ ಅಧ್ಯಕ್ಷರೇ ಗಂಭೀರವಾಗಿ ಪರಿಗಣಿಸುತ್ತೇವೆಂದು ಹೇಳಿದರೆ ಏನರ್ಥ ? ಕಳೆದ ಅಧಿವೇಶನದಲ್ಲಿ ಕೂಡ ಗಂಭೀರವಾಗಿ ಪರಿಗಣಿಸುತ್ತೇವೆಂದು ಹೇಳಿದರು. ಈಗ ಗಂಭೀರತೆ ಇಲ್ಲದೆ ಗಂಭೀರ ಎಂದು ಹೇಳುತ್ತಾರೆ. ಸಂಬಂಧಪಟ್ಟ ಸಚಿವರಿಗೆ ಸ್ವಲ್ಪವಾದರೂ ಗಂಭೀರತೆ ಬೇಡವೇ ?

11.50 ಎ.ಎಂ

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ :

ತಾವು ಗಂಭೀರತೆಯನ್ನು ಅರ್ಥ ಮಾಡಿಕೊಳ್ಳಬೇಕು. ಶಿಕ್ಷಣ ಸಂಸ್ಥೆಗಳಿಗೆ ಎಷ್ಟು ಕಟ್ಟಡಗಳನ್ನು ಕೊಡಬೇಕೋ ಅಷ್ಟನ್ನು ಶ್ರೀ ಗೊವಿಂದೇಗೌಡರವರು ಕೊಟ್ಟಿದ್ದಾರೆ. ಇದರ ಬಗ್ಗೆ ಉನ್ನತ ಶಿಕ್ಷಣ ಸಚಿವರು ಏಕೆ ಇಷ್ಟು ನಿರ್ಲಕ್ಷ್ಯ ಮಾಡುತ್ತಿದ್ದಾರೆ ? ಏಕೆಂದರೆ, ವಿದ್ಯಾರ್ಥಿಗಳು ಇವತ್ತು ರಸ್ತೆಗಿಳಿಯುವ ಪರಿಸ್ಥಿತಿ ಇದೆ. ಸ್ಥಳೀಯ ಶಾಸಕರ ಮೇಲೆ ಒತ್ತಡ ಬರುತ್ತದೆ. ನಾವು ಕೇಳುವುದಿಲ್ಲವೆಂಬ ಭಾವನೆ ಬರುತ್ತದೆ. ನೀವು ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಆದರೆ, ಎರಡು ಕೊಠಡಿಗಳಿಗೆ ಬೇಕಾದಷ್ಟು ಹಣವನ್ನು ಕೊಡುತ್ತೇವೆಂಬ ಭರವಸೆ ಕೊಟ್ಟರೆ ಒಳ್ಳೆಯದು. ಅದೂ ಸಾಕಾಗುವುದಿಲ್ಲ. ಆದರೂ ಸಹ, ಈ ಮಾತನ್ನು ನಾನು ಕಳಕಳಿಯಿಂದ ತಮ್ಮಲ್ಲಿ ಕೇಳುತ್ತಿದ್ದೇನೆ.

ಶ್ರೀ ಬಿ.ಎ. ಮೊಯಿದೀನ್ : ನೀವು ಚುನಾವಣೆಯನ್ನು ಧೈರ್ಯದಿಂದ ಎದುರಿಸುವ ಹಾಗೆ ಮಾಡೋಣ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ತಾವು ಹಗುರವಾದ ಉತ್ತರವನ್ನು ಹೇಳುವುದು ಬೇಡ. ಇದು ರಾಜ್ಯದ ಸಮಸ್ಯೆ. ನನ್ನ ಕ್ಷೇತ್ರವಾದ ಯಲ್ಲಾಪುರದಲ್ಲಿಯೂ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಸುಮಾರು 500ವಿದ್ಯಾರ್ಥಿಗಳು ಓದುತ್ತಿದ್ದಾರೆ. ಅವರಿಗೆ ಕಳೆದ 12ವರ್ಷಗಳಿಂದ ಒಂದು ರೂಪಾಯಿ ಬಾಡಿಗೆಯನ್ನೂ ಕೊಟ್ಟಿಲ್ಲ. ಈಗ ಕಾಲೇಜು ಕಟ್ಟಡಕ್ಕೆ ಹಣವೂ ಇಲ್ಲ. ಒಂದು ರೂಪಾಯಿಯ ಗ್ರಾಂಟನ್ನೂ ಕೊಟ್ಟಿಲ್ಲ. ಆ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ಶಿಕ್ಷಣ ಮುಂದುವರಿಸುವುದಕ್ಕೆ ಅವಕಾಶ ಕೊಡುತ್ತಿಲ್ಲ. ಇವರು ಈ ರೀತಿ ಹಗುರವಾದ ಉತ್ತರ ಕೊಟ್ಟರೆ, ನಾವು ನಮ್ಮ ಕ್ಷೇತ್ರದ ಜನರಿಗೆ ಈ ರೀತಿ ಸರ್ಕಾರ ಬೇಜವಾಬ್ದಾರಿಯಾಗಿ ಮಾತನಾಡುತ್ತಿದೆ ಎಂದು ಹೇಳಬೇಕಾಗುತ್ತದೆ. ಈಗಾಗಲೇ ಈ ಸರ್ಕಾರದ ಬಣ್ಣ ಗೊತ್ತಾಗಿದೆ.

ಹೊನ್ನಾವರದಲ್ಲಿ ರಕ್ತನಿಧಿ ಸ್ಥಾಪಿಸುವ ಬಗ್ಗೆ

227(1673)

ಡಾ ॥ ಎಂ.ಪಿ. ಕರ್ಕಿ (ಕುಮಟ) : ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಉತ್ತರ ಕನ್ನಡ ಜಿಲ್ಲೆ ಹೊನ್ನಾವರದಲ್ಲಿ ರಕ್ತನಿಧಿ ಸ್ಥಾಪಿಸಲು ಆಯವ್ಯಯದಲ್ಲಿ ಹಣ ನಿಗಧಿ ಪಡಿಸಿದೆಯೇ ?

ಆ) ಹಾಗಿದ್ದಲ್ಲಿ ಅದನ್ನು ಯಾವಾಗ ಪ್ರಾರಂಭಿಸಲಾಗುವುದು ?

ಡಾ ॥ ಹೆಚ್.ಪಿ. ಮಹಾದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ರೂ. 1.00ಲಕ್ಷಗಳನ್ನು ಈ ಯೋಜನೆಗೆ ಜಿಲ್ಲಾ ಪರಿಷತ್ತು ನಿಗಧಿಪಡಿಸಿದೆ.

ಆ) ಔಷಧ ಮತ್ತು ಕಾಂತಿವರ್ಧಕ ಕಾಯಿದೆಯನ್ವಯ ರಕ್ತನಿಧಿ ಸ್ಥಾಪಿಸಬೇಕಾದಲ್ಲಿ ವಿಧಿಸಲಾದ ಹಲವು ಕಠಿಣವಾದ ಷರತ್ತುಗಳನ್ನು ಅವಶ್ಯಕವಾಗಿ ಪೂರೈಸಬೇಕಾಗಿರುತ್ತದೆ. ಮೊದಲನೆಯ ಹಂತದಲ್ಲಿ ರಕ್ತನಿಧಿ ಕೇಂದ್ರಗಳು ಜಿಲ್ಲಾ ಕೇಂದ್ರಸ್ಥಾನಗಳಲ್ಲಿನ ಆಸ್ಪತ್ರೆಗಳಲ್ಲಿ ಮಾತ್ರ ಸ್ಥಾಪಿತಗೊಳ್ಳುತ್ತಿದೆ.

ಡಾ ॥ ಎಂ.ಪಿ. ಕರ್ಕಿ : ಮೊದಲನೆಯ ಹಂತದಲ್ಲಿ ರಕ್ತನಿಧಿ ಕೇಂದ್ರಗಳು ಜಿಲ್ಲಾ ಕೇಂದ್ರಸ್ಥಾನಗಳಲ್ಲಿನ ಆಸ್ಪತ್ರೆಗಳಲ್ಲಿ ಮಾತ್ರ ಸ್ಥಾಪಿತಗೊಳ್ಳುತ್ತಿದೆ ಎಂದು ಉತ್ತರ ಕೊಟ್ಟಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕಾರವಾರದಲ್ಲಿ ರಕ್ತನಿಧಿ ಕೇಂದ್ರ ಸ್ಥಾಪನೆಯಾಗಿ ಎಂಟು ತಿಂಗಳಾಯಿತು. ಅದು ಕೆಲಸ ಮಾಡುತ್ತಿಲ್ಲ. ಎಂಟು ತಿಂಗಳಿಂದ ಕೇಳಿದರೂ ಸಹ ತಾವು ಡಾಕ್ಟರನ್ನು ಅಲ್ಲಿಗೆ ವರ್ಗ ಮಾಡುತ್ತಿಲ್ಲ. ಅದಾದ ನಂತರ, ಜಿಲ್ಲಾ ಕೇಂದ್ರ ಸ್ಥಾಪನೆಯಾದ ನಂತರ, ಉಳಿದ ಕೇಂದ್ರಗಳನ್ನು ಸ್ಥಾಪನೆ ಮಾಡಲು ಏನು ತೊಂದರೆ ಇದೆ ? ಹೊನ್ನಾವರದಲ್ಲಿ ರಕ್ತನಿಧಿ ಕೇಂದ್ರದ ಅವಶ್ಯಕತೆ ಇದೆ ಎಂದು ಹೇಳಿ ಜಿಲ್ಲಾ ಪಂಚಾಯತ್‌ನವರು ಈಗಾಗಲೇ ತಮ್ಮ ಬಡ್ಜೆಟ್‌ನಲ್ಲಿ ಸಾಂಕೇತಿಕವಾಗಿ ಹಣ ಒದಗಿಸಿದ್ದಾರೆ. ಅದಕ್ಕೆ ತಾವು ಗೌರವ ಕೊಟ್ಟು, ಅದನ್ನು ಮನಗಂಡು ಹೊನ್ನಾವರದಲ್ಲಿ ಏಕೆ ಸ್ಥಾಪನೆ ಮಾಡುವುದಿಲ್ಲವೆಂದು ನಾನು ಕೇಳುತ್ತಿದ್ದೇನೆ. ಈಗಾಗಲೇ ಸ್ಥಾಪನೆ ಮಾಡಿರುವ ಕೇಂದ್ರ ಕೆಲಸ ಮಾಡುತ್ತಿಲ್ಲ. ಅಲ್ಲಿಗೆ ಡಾಕ್ಟರ್‌ನ್ನು ಪೋಸ್ಟಿಂಗ್ ಮಾಡಿಲ್ಲ. ಈಗ ಮತ್ತೊಂದು ಕೇಂದ್ರವನ್ನು ಸ್ಥಾಪಿಸಲೇನು ತೊಂದರೆ?

ಡಾ ॥ ಹೆಚ್.ಪಿ. ಮಹಾದೇವಪ್ಪ :- ವಿಶ್ವಬ್ಯಾಂಕ್ ನೆರವಿನಡಿಯಲ್ಲಿ ಸುಮಾರು 44ಟ್ರಾಮಾ ಕೇಂದ್ರಗಳನ್ನು ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ಗುರುತಿಸಿ ಆಸ್ಪತ್ರೆಗಳಿಗೆ ಹೊಂದಿಕೊಳ್ಳುವ ರೀತಿಯಲ್ಲಿ ಅವುಗಳನ್ನು ಮಾಡಿದ್ದೇವೆ. ಅದೇ ರೀತಿಯಾಗಿ, ಸುಮಾರು ಮೂರುವರೆ ಕೋಟಿ ರೂಪಾಯಿಗಳ ಅಂದಾಜಿನಲ್ಲಿ ಜಿಲ್ಲಾ ಆಸ್ಪತ್ರೆಗಳಲ್ಲಿ ಮತ್ತು ರಾಷ್ಟ್ರೀಯ, ರಾಜ್ಯ ಹೆದ್ದಾರಿಗಳಲ್ಲಿ ಬ್ಲಡ್ ಬ್ಯಾಂಕ್‌ಗಳನ್ನು ತೆರೆಯಲು ಕ್ರಮ ಕೈಗೊಂಡಿದ್ದೇವೆ. ಹೊನ್ನಾವರಕ್ಕೆ ಸಂಬಂಧಪಟ್ಟಂತೆ ಜಿಲ್ಲಾ ಆರೋಗ್ಯಾಧಿಕಾರಿ ಮತ್ತು ಶಾಸಕರಿಂದ ಮನವಿ ಬಂದಿದೆ. ಜಿಲ್ಲಾ ಪರಿಷತ್‌ನಿಂದ ಒಂದು ಲಕ್ಷ ರೂಪಾಯಿಗಳನ್ನು ಅದಕ್ಕೋಸ್ಕರ ನಿಗದಿಪಡಿಸಿದ್ದಾರೆ. ಜಿಲ್ಲಾ ಪರಿಷತ್‌ನಿಂದ ಒಂದು ರೆಸಲ್ಯೂಷನ್ ಮಾಡಿ ನಮಗೆ ಕಳುಹಿಸಿಕೊಟ್ಟಿಲ್ಲ. ಕಾರವಾರದಲ್ಲಿ ಈಗಾಗಲೇ ಬ್ಲಡ್ ಬ್ಯಾಂಕ್ ಆಫೀಸರ್‌ನ್ನು ಪೋಸ್ಟಿಂಗ್ ಮಾಡಿದ್ದೇವೆ. ಕಾರ್ಯ ಪ್ರಾರಂಭಿಸುತ್ತೇವೆ.

ಬ್ಲಡ್ ಬ್ಯಾಂಕ್ ಬೇಕೆಂದರೆ ಡ್ರಗ್, ಕಾಸ್ಮೆಟಿಕ್ಸ್ ಕಾನೂನಿನ ಪ್ರಕಾರ ಮತ್ತು ಸುಪ್ರೀಂಕೋರ್ಟಿನ ನಿರ್ದೇಶನದ ಪ್ರಕಾರ ಒಂದು ಸಾವಿರ ಚದರ ಅಡಿ ಜಾಗ ಬೇಕಾಗುತ್ತದೆ. ಜಿಲ್ಲಾ ಆಸ್ಪತ್ರೆಗಳಲ್ಲಿ ಬ್ಲಡ್ ಬ್ಯಾಂಕ್ ತೆರೆಯಲಿಕ್ಕೆ ಸರ್ಕಾರ ಆದ್ಯತೆ ಕೊಟ್ಟಿದೆ. ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ಬ್ಲಡ್ ಬ್ಯಾಂಕ್ ತೆರೆಯುವ ಉದ್ದೇಶ ಸರ್ಕಾರಕ್ಕೆ ಇದ್ದು, ಈಗಾಗಲೇ ನಾವು ವಿಶ್ವಬ್ಯಾಂಕಿನ ನೆರವಿನಡಿಯಲ್ಲಿ 44 ಟ್ರಾಮಾ ಸೆಂಟರ್ಸ್ : ಆಕ್ಸಿಡೆಂಟಲ್ ಯುನಿಟ್ಸ್ ಮಾಡಿದ್ದೇವೆ. ಕೇಂದ್ರಸರ್ಕಾರ ಕೂಡ ಪರಿಶೀಲನೆ ಮಾಡುತ್ತಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಬ್ಲಡ್ ಬ್ಯಾಂಕನ್ನು ತೆರೆಯುವ ಬದಲಾಗಿ ಬ್ಲಡ್‌ನ್ನು ಸ್ಟೋರ್ ಮಾಡಿ, ಡಿಸ್ಟ್ರಿಬ್ಯೂಟರಿ ಮೆಥಡ್‌ಗೆ ಅವಕಾಶ ಕೊಡಬೇಕೆಂದು ಕೇಂದ್ರಸರ್ಕಾರ ಈಗ ಆಲೋಚಿಸುತ್ತಿದೆ. ಅದು 8-10ದಿನಗಳಲ್ಲಿ ಫೈನಲ್ ಆಗಬಹುದು. ಅದಾದ ಮೇಲೆ, ಅದರ ಬಗ್ಗೆ ಪರಿಶೀಲಿಸಬಹುದು.

ಡಾ ॥ ಎಂ.ಪಿ. ಕರ್ಕಿ :- ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ರಕ್ತನಿಧಿ ಕೇಂದ್ರವನ್ನು ಸ್ಥಾಪನೆ ಮಾಡಬೇಕೆಂದು ರಾಜ್ಯ ಸರ್ಕಾರ ಈಗಾಗಲೇ ನಿರ್ಧರಿಸಿದೆ. ಕಾರವಾರ ನೂರು ಕಿಲೋಮೀಟರ್, ಉಡುಪಿ ನೂರೈವತ್ತು ಕಿಲೋಮೀಟರ್ ದೂರವಾಗುತ್ತದೆ. ನೂರು ಕಿಲೋಮೀಟರ್ ವ್ಯಾಪ್ತಿ ಕ್ರಮಿಸುವ ಸಂದರ್ಭದಲ್ಲಿ ಜನರು ಉಳಿಯುವುದಿಲ್ಲ. ಅದಕ್ಕೆ , ಈ ಬ್ಲಡ್ ಬ್ಯಾಂಕ್ ಅವಶ್ಯಕತೆ ಇದೆ ಎಂಬುದನ್ನು ಗಮನಿಸಿ ಜಿಲ್ಲಾ ಪಂಚಾಯತ್ ಸಾಂಕೇತಿಕವಾಗಿ ಒಂದು ಲಕ್ಷ ರೂಪಾಯಿಗಳನ್ನಿಟ್ಟುಕೊಂಡು ಸರ್ಕಾರವನ್ನು ಕೇಳಿದೆ. ಅದನ್ನು ಸ್ಥಾಪಿಸಲೇನು ತೊಂದರೆ ? ಅಲ್ಲಿ ದಿನನಿತ್ಯ ಅಪಘಾತಗಳಾಗುತ್ತಿವೆ. ಅಂತಹ ಸಂದರ್ಭದಲ್ಲಿ ತಾವು ನಿಶ್ಚಯಿಸಿದಂತೆ, ಹೊನ್ನಾವರಕ್ಕೂ ಕೂಡ ಬ್ಲಡ್ ಬ್ಯಾಂಕ್‌ನ್ನು ಒದಗಿಸಲು ಇರತಕ್ಕ ತೊಂದರೆಯೇನು ?

ಡಾ ॥ ಹೆಚ್.ಸಿ. ಮಹಾದೇವಪ್ಪ :- ಸ್ಥಾಪನೆ ಮಾಡಲು ತೊಂದರೆಯೇನಿಲ್ಲ. ಈಗಾಗಲೇ ನಾವು ಕಾರವಾರ ಜಿಲ್ಲೆಯಲ್ಲಿ ಸ್ಥಾಪನೆ ಮಾಡಿ, ಬ್ಲಡ್ ಬ್ಯಾಂಕ್ ಆಫೀಸರನ್ನು ಪೋಸ್ಟಿಂಗ್ ಮಾಡಿದ್ದೇವೆ.

ಡಾ ॥ ಎಂ.ಪಿ. ಕರ್ಕಿ :- ಪೋಸ್ಟಿಂಗ್ ಕೊಟ್ಟಿಲ್ಲ.

ಶ್ರೀ. ಕೆ. ಎಶ್ವೇಶ್ವರ ಹೆಗಡೆ :- ಅಲ್ಲಿ ಯಾರೂ ಇಲ್ಲ. ಅವರು ಅವರ ಸ್ಥಾನದಲ್ಲಿಲ್ಲದೆ, ಬೇರೆಲ್ಲೋ ಹೋಗಿ ಕೆಲಸ ಮಾಡುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ನಾವು ಬಹಳ ದಿವಸಗಳ ನಂತರ ಇಲ್ಲಿ ಸೇರಿದ್ದೇವೆ. ಅತ್ಯಂತ ಪ್ರಮುಖವಾಗಿರುವ ಪ್ರಶ್ನೆಯನ್ನು ಜವಾಬ್ದಾರಿಯುಳ್ಳ ಶಾಸಕರು ಕೇಳುತ್ತಿದ್ದಾರೆ. ತಾವು ಬ್ಲಡ್ ಬ್ಯಾಂಕ್ ಆಫೀಸರ್‌ನ್ನು ಪೋಸ್ಟಿಂಗ್ ಮಾಡುವುದರ ಬಗ್ಗೆ ಹೇಳಿದ್ದೀರಿ. ಅವರು ಅಲ್ಲಿಗೆ ಹೋಗಿಲ್ಲವೆಂಬುದು ಸಚಿವರಾಗಿ ತಮಗೆ ಗೊತ್ತಿರಬೇಕು. ಮತ್ತೆ ತಾವು ಅದನ್ನೇ ಹೇಳುತ್ತಿದ್ದೀರಿ. ವಿಶ್ವಬ್ಯಾಂಕ್ ಬಗ್ಗೆ ಪ್ರಸ್ತಾಪಿಸಿದ್ದೀರಿ. ಚಾಲಕರಿಲ್ಲದಿದ್ದರೂ ಸಹ ವಾಹನಗಳನ್ನು ಖರೀದಿ ಮಾಡಿದ್ದಾರೆ. ವಾಹನಗಳನ್ನು ತಂದು ನಿಲ್ಲಿಸಿ, ಅವು ತುಕ್ಕು ಹಿಡಿಯುತ್ತಿವೆ. ವಿಶ್ವಬ್ಯಾಂಕ್‌ನಿಂದ ತಂದ ಹಣದಲ್ಲಿ ಬ್ಲಡ್ ಬ್ಯಾಂಕ್‌ನ್ನು ಸ್ಥಾಪನೆ ಮಾಡಬಹುದಾಗಿತ್ತಲ್ಲವೇ ? ಇದರಿಂದ ಹಣದ ಸದ್ವಿನಿಯೋಗವಾಗುತ್ತಿತ್ತು. ಇದರ ಬಗ್ಗೆ ತಾವೇಕೆ ಚಿಂತನೆ ಮಾಡುವುದಿಲ್ಲ ?

Dr. H.C. MAHADEVAPPA :- At the time of approving the World Bank project, all aspects have been very clearly identified and scrutinised.

ಯಾವ್ಯಾವುದಕ್ಕೆ ಆದ್ಯತೆ ಕೊಡಬೇಕೆಂದು ಹೇಳಿ ಅದನ್ನು ಮಾಡಿದ್ದೇವೆ. ಪ್ರತಿಯೊಂದು ತಾಲ್ಲೂಕಿಗೂ ಕೊಡುವುದಕ್ಕೆ ಕಷ್ಟವಾಗುತ್ತದೆ. ಸುಪ್ರೀಂಕೋರ್ಟ್ ನಿರ್ದೇಶನದ ಪ್ರಕಾರ ಮತ್ತು ಡ್ರಗ್ ಅಂಡ್ ಕಾಸ್ಮೆಟಿಕ್ ಆಕ್ಟ್ ಪ್ರಕಾರ ನಾವು ಮಾಡಬೇಕಾಗುತ್ತದೆ. ಒಂದು ಸಾವಿರ ಚದರ ಅಡಿಗಳಷ್ಟು ಜಾಗಬೇಕಾಗುತ್ತದೆ. ಮೂರು ಎ.ಸಿ. ರೂಂಗಳು ಬೇಕಾಗುತ್ತವೆ. ಸುಮ್ಮನೆ ಒಂದು ರೂಮು ತೆಗೆದು ಬ್ಲಡ್ ಬ್ಯಾಂಕ್ ಕೊಡಿ ಎಂದರೆ ಆಗುವು ದಿಲ್ಲ, Because of the increasing infectionous diseases

ಹಾಗೆ ಮಾಡುವುದಕ್ಕೆ ಸಾಧ್ಯವಿಲ್ಲ.

ಅಧ್ಯಕ್ಷರು :- ಹೊನ್ನಾವರ ಕೂಡ ಒಂದು ನ್ಯಾಷನಲ್ ಹೈವೇಗೆ ಬರುತ್ತದೆ. ಅಲ್ಲಿಗೆ ಬೇಕಾಗಿರುವ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗಿದ್ದು, ಜಿಲ್ಲಾ ಪಂಚಾಯತ್ ಹಣ ಕೊಟ್ಟಿದೆ. ಅಲ್ಲಿ ನೀವೇಕೆ ಬ್ಲಡ್ ಬ್ಯಾಂಕನ್ನು ಸ್ಥಾಪನೆ ಮಾಡುವುದಿಲ್ಲವೆಂದು ಅವರು ಕೇಳುತ್ತಿದ್ದಾರೆ

ಡಾ ॥ ಹೆಚ್.ಪಿ. ಮಹಾದೇವಪ್ಪ :- ಸ್ಥಾಪನೆ ಮಾಡಬಾರದೆಂಬ ಉದ್ದೇಶವಿಲ್ಲ. ಒಂದೇ ಸಾರಿ ಎಲ್ಲಾ ಕೇಳಿದರೆ ಕಷ್ಟವಾಗುತ್ತದೆ. ವಾಹನಗಳನ್ನು ತೆಗೆದುಕೊಳ್ಳಬೇಕಾದರೆ, 30ವರ್ಷ ಒಬ್ಬ ಚಾಲಕನಾಗಿರುವವನಿರುತ್ತಾನೆ. ಒಂದೊಂದು ವಾಹನಕ್ಕೆ ಒಬ್ಬೊಬ್ಬರನ್ನು ಕೊಡುವುದಕ್ಕಾಗುವುದಿಲ್ಲ. ಎಷ್ಟಿದೆ ಎಂಬ ಬಗ್ಗೆ ಡೀಟೇಲ್ ಆಗಿ ಸರ್ವೆ ಮಾಡಿಸುತ್ತಿದ್ದೇವೆ. ಖಾಲಿ ಇರುವ ಹುದ್ದೆಗಳನ್ನು ತುಂಬುವ ಕೆಲಸ ನಡೆಯುತ್ತಿದೆ. 15-20ದಿನಗಳಲ್ಲಿ ಅದೆಲ್ಲಾ ಆಗಬಹುದು.

ಶ್ರೀ ಬಿ.ಎಸ್.ಯಡಿಯೂರಪ್ಪ :- ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ವಾಹನಗಳನ್ನು ಖರೀದಿ ಮಾಡಿದ್ದೀರಿ. ಚಾಲಕರೇ ಇಲ್ಲ. ಯಾವಾಗ ಡ್ರೈವರನ್ನು ಅಪಾಯಿಂಟ್ ಮಾಡಿಕೊಳ್ಳುತ್ತೀರಿ?

ಡಾ ॥ ಹೆಚ್.ಪಿ. ಮಹಾದೇವಪ್ಪ :- ಮಾನ್ಯ ಸದಸ್ಯರು ಹೇಳುವ ವಿಚಾರ ನನಗೆ ಗೊತ್ತಿದೆ. 30ವರ್ಷದ ಚಾಲಕನಾಗಿರುವ ಒಬ್ಬ ಸಿಬ್ಬಂದಿ ಇದ್ದು, ಅವನೆಷ್ಟು ಕೆಲಸ ಮಾಡುತ್ತಾನೆ? ಎಷ್ಟು ಸಮಯ ಬೇಕೆಂಬ ಬಗ್ಗೆ ಎಲ್ಲಾ ಸರ್ವೆ ಮಾಡಿಸುತ್ತಿದ್ದೇವೆ. ಈಗಾಗಲೇ ನಾವು ಸುಮಾರು 162ಜನ ಚಾಲಕರನ್ನು ರಿಕ್ರೂಟ್ ಮಾಡಿದ್ದೇವೆ. ರಿಕ್ರೂಟ್‌ಮೆಂಟ್ ಪ್ರೊಸೀಜರ್ ನೇರ ನೇಮಕಾತಿ ಮುಖಾಂತರ ಆಗುತ್ತಿದೆ. ಸಧ್ಯದಲ್ಲೇ ಅದು ಮುಗಿಯಲಿದೆ.

ಶ್ರೀ ಪಿ.ಆರ್. ಸಗೀರ್ ಅಹಮದ್ :- ತಮ್ಮ ಮೂಲಕ ನಾನು ಸರ್ಕಾರವನ್ನು ಕೇಳುವುದೇನೆಂದರೆ, ಚಾಲಕರಿಲ್ಲದೆ, ವಾಹನಗಳನ್ನು ಏಕೆ ಖರೀದಿಸಲಾಯಿತು ?

ಅಧ್ಯಕ್ಷರು :- ತಾವು ಮಂತ್ರಿಗಳಾಗಿದ್ದಿರಿ. ಗೊತ್ತಿರುವ ವಿಚಾರವೇ. ಏಕೆ ಚರ್ಚೆ ಮಾಡಿ ಸಮಯ ವ್ಯರ್ಥ ಮಾಡುತ್ತೀರಿ ? ಯಾವುದೋ ಒಂದು ಸ್ಕೀಂನಲ್ಲಿ ವಾಹನಗಳು ಬರುತ್ತವೆ. ಅವರು ಚಾಲಕರನ್ನು ಕೊಡುವುದಿಲ್ಲ. ವೆಹಿಕಲ್ಸ್ ಬರುತ್ತವೆ ಎಂದು ಗೊತ್ತಾದ ಮೇಲೆ ಇವರು ಡ್ರೈವರ್ ಪೋಸ್ಟ್‌ಗಳನ್ನು ಕ್ರಿಯೇಟ್ ಮಾಡಿಕೊಂಡು ಡ್ರೈವರ್ಸ್‌ಗಳನ್ನು ರಿಕ್ರೂಟ್ ಮಾಡಿಕೊಂಡು ಬಂದಂಥ ವಾಹನಗಳ ಸದುಪಯೋಗ ಮಾಡಿಕೊಳ್ಳ ಬೇಕಾಗಿತ್ತು, ಕೋ-ಆರ್ಡಿನೇಷನ್ ಇಲ್ಲದೇ ಇರುವುದರಿಂದ ನೀವು ಹೇಳಿದ ರೀತಿಯಲ್ಲಿ ಇದು ಆಗಲಿಲ್ಲ. ಈಗ ಇವರು ಡ್ರೈವರ್ಸ್ ರಿಕ್ರೂಟ್ ಮಾಡಿಕೊಳ್ಳುತ್ತಿದ್ದೇವೆಂದು ಹೇಳುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ವಾಹನಗಳು ಬಂದ ತಕ್ಷಣ ಡ್ರೈವರ್ಸ್ ರಿಕ್ರೂಟ್ ಮಾಡಿಕೊಂಡಿದ್ದರೆ ಸದುಪಯೋಗವಾಗುತ್ತಿತ್ತಲ್ಲವೇ ?

ಡಾ ॥ ಹೆಚ್.ಪಿ. ಮಹಾದೇವಪ್ಪ : ನಾವೇನೂ ಜ್ಞಾನ ಇಲ್ಲದೇ ಇಲ್ಲಿ ಬಂದು ಕುಳಿತಿಲ್ಲ. ಈಗಾಗಲೇ ಸುಮಾರು 162 ಜನ ಚಾಲಕರನ್ನು ನೇರ ನೇಮಕಾತಿ ಮುಖಾಂತರ ನೇಮಕ ಮಾಡಿಕೊಂಡಿದ್ದೇವೆ.

ಡಾ ॥ ಎಂ.ಪಿ. ಕರ್ಕಿ : ಸರ್ಕಾರ ರಕ್ತನಿಧಿ ಕೇಂದ್ರಗಳನ್ನು ಸ್ಥಾಪನೆ ಮಾಡುತ್ತೇವೆಂದು ಹೇಳುವುದಾದರೆ ಕಟ್ಟಡ ಕಟ್ಟುವುದಕ್ಕೆ ಏನು ತೊಂದರೆ ಇಲ್ಲ, ಏಕೆಂದರೆ, ಕೆ.ಹೆಚ್.ಡಿ.ಪಿ.ಯಿಂದ ನೆರವು ಬರುತ್ತದೆ.

ಅಧ್ಯಕ್ಷರು : ಸಚಿವರು ಏನು ಹೇಳುತ್ತಾರೆಂದರೆ, ಆದ್ಯತೆಯ ಪ್ರಕಾರ ನಮ್ಮ ಪಾಲಿಸಿ ಪ್ರಕಾರ ಎಲ್ಲೆಲ್ಲಿ ಮೂಲ ಸೌಲಭ್ಯಗಳಿವೆಯೋ ಅಲ್ಲೆಲ್ಲಾ ಮಾಡಿಕೊಂಡು ಬರಬೇಕು ಎಂದು. ತಾವು ಹೇಳತಕ್ಕಂಥ ಜಾಗದಲ್ಲಿ ಕೂಡ ಮಾಡಬೇಕಾದ ಅವಶ್ಯಕತೆ ಇದೆ, ಆದರೆ ಸಧ್ಯಕ್ಕೆ ಮಾಡುವ ಸ್ಥಿತಿಯಲ್ಲಿ ನಾವು ಇಲ್ಲ ಎಂದು ಹೇಳುತ್ತಿದ್ದಾರೆ.

ಡಾ ॥ ಎಂ. ಪಿ. ಕರ್ಕಿ : ಬಿಲ್ಡಿಂಗ್ ಮಾಡುವುದಕ್ಕೆ ಕೆ.ಹೆಚ್.ಡಿ.ಪಿ.ಯಿಂದ ನೆರವು ದೊರಕುತ್ತದೆ ಹಾಗೂ ಕೇಂದ್ರ ಸರ್ಕಾರದಿಂದ ರಕ್ತನಿಧಿಗಾಗಿ ನೆರವು ದೊರಕುತ್ತದೆ. ಸರ್ಕಾರದವರು ಸ್ವಲ್ಪ ಹಣ ಹಾಕಬೇಕು ಎನ್ನತಕ್ಕಂಥ ನಿರ್ಧಾರವನ್ನು ಏಕೆ ಮಾಡಬಾರದು ?

ಡಾ ॥ ಹೆಚ್.ಸಿ. ಮಹಾದೇವಪ್ಪ : ನಾನು ಏನು ಹೇಳುತ್ತೇನೆ ಎನ್ನತ್ಕಂಥದ್ದು ಮಾನ್ಯ ಸದಸ್ಯರಿಗೆ ಗೊತ್ತಾಗಲಿಲ್ಲ ಎಂದರೆ ನಾನು ಯಾವ ರೀತಿ ಉತ್ತರ ಹೇಳಬೇಕು ಎಂಬುದು ಗೊತ್ತಾಗುತ್ತಿಲ್ಲ. ಜಿಲ್ಲಾ ಆಸ್ಪತ್ರೆಗಳನ್ನು ಹೆಚ್ಚು ಕಾನ್‌ಸೆಂಟ್ರೇಟ್ ಮಾಡುತ್ತಿದ್ದೇವೆ. ರಕ್ತನಿಧಿಗಾಗಿಯೇ ಜಿಲ್ಲಾ ಪಂಚಾಯಿತಿಗಳು ಒಂದು ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ.

Without consulting the Drugs Control Department ; There is Drugs and Cosmetics Act.

ಸುಪ್ರೀಂ ಕೋರ್ಟ್‌ನ ನಿರ್ದೇಶನ ಕೂಡ ಇದೆ. ಒಂದು ಬ್ಲಡ್ ಬ್ಯಾಂಕ್ ತೆರೆಯಬೇಕಾದರೆ 35ಲಕ್ಷ ರೂಪಾಯಿಗಳು ಖರ್ಚಾಗುತ್ತವೆ. ಒಂದು ಸಾವಿರ ಚದರ ಮೀಟರ್ ವ್ಯಾಸವುಳ್ಳ ರೂಮ್‌ಗಳಲ್ಲಿ ಮೂರು ವಿಭಾಗಗಳನ್ನು ಕಟ್ಟಬೇಕಾಗುತ್ತದೆ. ಈಗಾಗಲೇ ಕಾರವಾರದಲ್ಲಿ ಮಾಡಿದ್ದೇವೆ. ಹೊನ್ನಾವರಕ್ಕೆ ಕೊಡಬಾರದು ಎನ್ನುವ ಉದ್ದೇಶ ಇಲ್ಲ. ಆಕ್ಸಿಡೆಂಟ್ಸ್ ಆಗುತ್ತಿವೆ ಇದು ಮೇಜರ್ ಕಿಲ್ಲರ್ ಡಿಸೀಜ್;ನಾವು ಇಲ್ಲಿ ಬ್ಲಡ್‌ಬ್ಯಾಂಕ್ ಕೊಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ಎಲ್ಲೆಲ್ಲಿ ರಾಷ್ಟ್ರೀಯ ಹೆದ್ದಾರಿಗಳಿವೆಯೋ ಹಾಗೂ ಎಲ್ಲೆಲ್ಲಿ ಜಿಲ್ಲಾ ಆಸ್ಪತ್ರೆಗಳಿವೆಯೋ ಅಲ್ಲೆಲ್ಲಾ ಪ್ರಾಜೆಕ್ಟ್ ಮಾಡುವಂಥ ಸಂದರ್ಭದಲ್ಲಿ ಗುರುತಿಸಿದ್ದೇವೆ.

ಡಾ ॥ ಎಂ.ಪಿ. ಕರ್ಕಿ : ಸರ್ಕಾರಕ್ಕೆ ಹಣದ ಕೊರತೆ ಏನೂ ಕಾಣುವುದಿಲ್ಲ. ಇದಕ್ಕಾಗಿ ಕೆ.ಹೆಚ್.ಡಿ.ಪಿ.ಯಿಂದ ಬಿಲ್ಡಿಂಗ್ ಕಟ್ಟಲು ನೆರವು ದೊರೆಯುತ್ತದೆ.

ಅಧ್ಯಕ್ಷರು : ನಿಮ್ಮ ಸಲಹೆಯನ್ನು ಮಾನ್ಯ ಸಚಿವರು ಗಮನದಲ್ಲಿಟ್ಟುಕೊಂಡು ಸಂಪನ್ಮೂಲಗಳನ್ನು ನೋಡಿಕೊಂಡು ಮುಂದಿನ ಕ್ರಮ ತೆಗೆದುಕೊಳ್ಳುತ್ತಾರೆ.

ಸುರತ್ಕಲ್ ವಿಧಾನ ಸಭಾಕ್ಷೇತ್ರದಲ್ಲಿ ಶಾಲಾ ಮಕ್ಕಳಿಗೆ ಸಮವಸ್ತ್ರ ಹಾಗೂ ಪುಸ್ತಕಗಳನ್ನು ಒದಗಿಸುವುದು.

228(1598)

ಶ್ರೀ ಕುಂಬ್ಳೆ ಸುಂದರ್ ರಾವ್ (ಸುರತ್ಕಲ್) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸುರತ್ಕಲ್ ವಿಧಾನ ಸಭಾ ಕ್ಷೇತ್ರದಲ್ಲಿ 1998-99ನೇ ಸಾಲಿನಲ್ಲಿ ಶಾಲಾ ಮಕ್ಕಳ ಪುಸ್ತಕ, ಲಕ್ಕಿ ಮತ್ತು ಸಮವಸ್ತ್ರಗಳಿಗೆ ನಿಗಧಿಪಡಿಸಿದ ಅನುದಾನದ ಮೊತ್ತವೆಷ್ಟು (ಪ್ರತ್ಯೇಕ ವಿವರ ಒದಗಿಸುವುದು)

ಆ) ಶಾಲಾ ಮಕ್ಕಳ ಸಮವಸ್ತ್ರ ಪುಸ್ತಕಗಳು ಸಕಾಲದಲ್ಲಿ ಒದಗುತ್ತಿಲ್ಲ ಎಂಬುದು ನಿಜವೇ ?

ಇ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಪ್ರೌಢ ಶಿಕ್ಷಣ ಸಚಿವರು)

ಅ) 1998-99ನೇ ಸಾಲಿನಲ್ಲಿ ಶಾಲಾ ಮಕ್ಕಳ ಪುಸ್ತಕ ಲಕ್ಕಿ ಮತ್ತು ಸಮವಸ್ತ್ರಕ್ಕೆಂದು ಯಾವುದೇ ಅನುದಾನವನ್ನು ಪ್ರತ್ಯೇಕವಾಗಿ ಸುರತ್ಕಲ್ ವಿಧಾನ ಸಭಾ ಕ್ಷೇತ್ರಕ್ಕೆ ಒದಗಿಸಿರಲಿಲ್ಲ. ಆದರೆ ಈ ಸದರಿ ಬಾಬ್ತುಗಳಿಗೆ ಮಾಡಿರುವ ವೆಚ್ಚ ಈ ಕೆಳಕಂಡಂತೆ ನೀಡಿದೆ :